International Journal of Kannada Research
www.kannadajournal.com

ISSN: 2454–5813
IJKR 2018; 4(2): 85-89
© 2018 IJKR
www.kannadajournal.com
Received: 19-02-2018
Accepted: 20-03-2018

**Shwetha MB**
Research Scholar, Karnataka Folklore University
Gotagodi Haveri district
Karnataka, India

**Correspondence**
**Shwetha MB**
Research Scholar, Karnataka Folklore University
Gotagodi Haveri district
Karnataka, India

# ವಸಾಹತುಶಾಹಿ ತಂದ ಆರ್ಥಿಕ ನೀತಿಗಳು ಮತ್ತು ಜನಪದರ ಪ್ರತಿರೋಧ

**Shwetha MB**

ಪ್ರಭುತ್ವ ವ್ಯವಸ್ಥೆಯೊಂದು ಜನಸಾಮಾನ್ಯನ ಅಗತ್ಯತೆಗಳಿಗಾಗಿ ರೂಪುಗೊಂಡಿದ್ದರೆ, ಅಲ್ಲಿ ತಕರಾರುಗಳಿರಲಾರದು. ಆದರೆ ವಸಾಹತು ಆಡಳಿತವು ಭಾರತವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಮತ್ತು ನಿಯಂತ್ರಣದಲ್ಲಿ ಇರಿಸಿಕೊಳ್ಳುವ ದಾರಿಗಳನ್ನು ಅನ್ವೇಷಿಸುತ್ತಲೇ ಹಲವು ಬಗೆಯ ಪ್ರಯೋಗಗಳಿಗೆ ದೇಶವನ್ನು ಒಳಪಡಿಸುತ್ತಾ ಹೋಯಿತು. ಈ ನಿಟ್ಟಿನಲ್ಲಿ ಅದು ಜನವಿರೋಧಿಯಾಗಿಯೂ ರೂಪುಗೊಂಡಿತು. ಸಮಾಜದಲ್ಲಿ ಈ ಆಡಳಿತವು ಒಂದು ಬಗೆಯ ಆತಂಕ ಮತ್ತು ದಿಗಿಲಿಗೆ ಕಾರಣವಾಯಿತು. ಬ್ರಿಟಿಷರು ತಾವು ನೇರವಾಗಿ ಭಾರತೀಯರನ್ನೇ ತಮ್ಮ ದುಡಿಮೆಗೆ ಕೂಲಿಗಳನ್ನಾಗಿ ಬಳಸಿಕೊಳ್ಳತೊಡಗಿದರು. ಕಡಿಮೆ ಸಂಬಳಕ್ಕೆ ಸ್ಥಳೀಯರನ್ನು ದುಡಿಸತೊಡಗಿದರು. ನಿತ್ಯದ ಖರ್ಚಿಗೂ ಹಣವಿಲ್ಲದೇ ಬಳಲುತಿದ್ದವರಿಗೆ ಈ ಬ್ರಿಟಿಷ್ ಪ್ರಭುಗಳು ನೀಡುತ್ತಿದ್ದ ಸಂಬಳ ಆಶ್ರಯ ನೀಡುತ್ತಿತ್ತು. ಆದರೂ ಕೆಲವು ಪ್ರಜ್ಞಾವಂತ ಮನಸುಗಳು ಪರಕೀಯ ಪ್ರಭುತ್ವದ ಈ ಶೋಷಣೆಯನ್ನು ಪ್ರತಿಭಟಿಸತೊಡಗಿದರು.

> “ದುಡಿಯದಲೆ ಚೈನಿ ಹೊಡೆಯುವ ಪರಕೀಯರ
> ಬಡಿವಾರ ಎಷ್ಟು ಹೇಳಲಿ ನಾನು
> ಹಿಡಿದತಂದ ಅಡವಿಯೊಳಗ ದುಡಿಯಲಿಕ್ಕೆ ಹಚ್ಚಿದರ
> ಸಿಡಿಯತದ ಬುಡಕಿನ ಶಗಣ
> ನಟ್ಟ ಕಡಿಯೋದಿಲ್ಲ ನೇಗಿಲ ಹೊಡೆಯುವುದಿಲ್ಲ
> ಟಾಕ ಹಿಡಿದ ಮಾಡತಾರ ಹಗಣ
> ಶರಾ ಬರದ ಸವರು ಪೂರಾ ಪಗಾರ ತಿಂದ
> ಹಿಂದಗಡೆ ತಗೋತಾರ ಪೇನ ಸೇನ
> ಭಾರಿ ಪಗಾರದ ನೌಕರಿ ಇದ್ದರ
> ತಮ್ಮ ಜನರಿಗೆ ಕೊಡತಾರ ಅದನ
> ರಾಜಿ ಸಾಹೇಬ ಸರ್ ರಾವ್ ಬಹದ್ದೂರಂತ
> ನಮ್ಮವರಿಗೆ ಕೊಡತಾರ ಪದವಿಯನ”[೧]

ಬ್ರಿಟಿಷ್ ಆಡಳಿತವನ್ನು ಭಾರತದಲ್ಲಿ ನಡೆಸಲು ನೇಮಿಸಲಾದ ಅಧಿಕಾರಿಗಳು ತಮ್ಮ ಸ್ವಾರ್ಥದ ಮಾರ್ಗ ಹಿಡಿದು, ತಮಗೆ ಬೇಕಾದ ರೀತಿಯ ಸ್ವೇಚ್ಛೆಯ ಅಧಿಕಾರವನ್ನು ನಿರ್ವಹಿಸುತ್ತಿದ್ದ ಕುರಿತು ಇಲ್ಲಿ ಟೀಕಿಸಲಾಗಿದೆ. ತಮ್ಮವರಿಗೆ ಬೇಕಾದ ಪದವಿಯನ್ನು ನೀಡಿ, ಅವರಿಗೆ ಹೆಚ್ಚು ಸಂಬಳದ ಕೆಲಸಗಳನ್ನು ಕೊಟ್ಟು ಸ್ಥಳೀಯರನ್ನು ಕೀಳುದರ್ಜೆಯ ಕೆಲಸಗಳಿಗೆ ನೇಮಿಸುವ ಪರಕೀಯ ತಂತ್ರದ ಬಗೆಗೆ ಜನಪದ ಕವಿಯ ವಿಡಂಬನೆಯಿದೆ. ಅಲ್ಲದೇ ಸಂಬಳದ ಜೊತೆ ಭತ್ಯವನ್ನು ವಸೂಲಿ ಮಾಡುವ ಗೀಳನ್ನು ಈ ಅಧಿಕಾರಿಗಳು ಹೊಂದಿದ್ದರೆಂದು ಹೇಳುತ್ತಾನೆ. ವಾಯಿಸರಾಯನಿಂದ ಹಿಡಿದು ಗವರ್ನರನವರೆಗೆ ಎಲ್ಲರೂ ಇಂಥ ಮೋಸದ ಆಡಳಿತವನ್ನು ನಡೆಸುತ್ತಾರೆಂಬುದು ಕವಿಯ ಆತಂಕ.

"ವಾಯುಸರಾಯರನ ಕೇಳರಿ ಪಗಾರ
ತಿಂಗಳಿಗಿಪ್ಪತ್ತೊಂದು ಸಾವಿರ
ಗವ್ವರ್ನರದು ಹತ್ತು ಸಾವಿರ
ಚೀಫ್ ಸೆಕ್ರೇಟರಿದು ಮೂರು ಸಾವಿರ
ಇಂಗ್ಲೆಂಡದಿಂದ ಹಿಂದುಸ್ಥಾನಕ ಬರುವುದಕ
ಹಾದಿ ಖರ್ಚು ಮೂವತ್ತು ಸಾವಿರ
ಕಚೇರಿ ಒಳಗ ಖರ್ಚಿ ಮಾಡಿಸಲಿಕ್ಕೆ
ಪ್ರತಿಯೊಂದು ಪ್ರಾಂತಕ್ಕೆ ಇಪ್ಪತ್ತೈದು ಸಾವಿರ"೨

ಇಷ್ಟೆಲ್ಲ ಅಲ್ಲದೆ ಭತ್ತೇದ ಹಣವನ್ನೂ ಪುಕ್ಕಟೆ ವಸೂಲಿ ಮಾಡುತ್ತಾರೆ. ಪಗಾರ(ಸಂಬಳ) ಅಲ್ಲದೆ ಬೇರೆ ಹಣವನ್ನೂ ಸುಲಿಯುತ್ತಾರೆ. ಹೀಗೆ ಅಧಿಕಾರಿಗಳು ತಮ್ಮ ಲಾಭಕ್ಕಾಗಿ ವ್ಯವಸ್ಥಿತವಾದ ಪರಿಸ್ಥಿತಿಯನ್ನು ನಿರ್ಮಿಸಿಕೊಂಡಿದ್ದರು. ತಮ್ಮ ಉಪಯೋಗಕ್ಕಾಗಿ ಸ್ಥಳೀಯರನ್ನು ಬಳಸಿಕೊಳ್ಳುತ್ತಿದ್ದ ಕ್ರಮವನ್ನು ಜನಪದ ಕವಿ ಖಂಡಿಸುತ್ತಾನೆ. ಭಾರತದ ಶ್ರೀಮಂತಿಕೆಯನ್ನು ಬಳಸಿಕೊಂಡು, ಇಲ್ಲಿನ ಖಜಾನೆಯನ್ನು ಖಾಲಿ ಮಾಡಿ ಇಂಗ್ಲೆಂಡಿಗೆ ಒಯ್ದು ಲಾಭ ಗಳಿಸುತ್ತಿದ್ದರೂ 'ಭಾರತವನ್ನು ನಿಯಂತ್ರಣದಲ್ಲಿ ಇಡಲು ಬೇಕಾದ ಕಾನೂನುಗಳನ್ನು ತಮ್ಮ ಹಿತಕ್ಕಾಗಿ ಜಾರಿಗೆ ತರುತ್ತಾರೆ' ಎನ್ನುವುದು ಜನಪದ ಕವಿಯ ಆತಂಕವಾಗಿದೆ. ಬ್ರಿಟಿಷ್ ಆಡಳಿತದ ಅಮಾನವೀಯ ವರ್ತನೆ, ನಿರ್ದಯತೆಗಳನ್ನು ಇಂಥಾ ಲಾವಣಿಗಳು ಸಾರುತ್ತವೆ. ಬ್ರಿಟಿಷರ ದಬ್ಬಾಳಿಕೆಗೆ ಉತ್ತರವಾಗಿ ಸಾವಿರಾರು ಹಾಡುಗಳು ಮೌಖಿಕ ಮಾಧ್ಯಮದ ಮೂಲಕ ಹೊರಬಂದಿದೆ.

**ತೆರಿಗೆ ಪ್ರತಿರೋಧ:**

'ತತ್ವಪದಕಾರರು ಮತ್ತು ವಸಾಹತುಶಾಹಿ ವ್ಯವಸ್ಥೆ' ಎಂಬ ಕೃತಿಯಲ್ಲಿ ರಘುನಾಥರಾಯರು ನೀಡಿದ ಉದಾಹರಣೆ ಮುಖ್ಯವಾಗುತ್ತವೆ. ರಾಯನಾಯ್ಕನಿಗೆ ಸಂಬಂಧಿಸಿದ ತೆರಿಗೆ ವಿವರಗಳಿವೆ. ತೆರಿಗೆ ವಸೂಲಿ ಕೊಡದಿದ್ದರೆ ಬಲವಂತವಾಗಿ ಜಪ್ತಿ ಮಾಡಿಸುತ್ತಿದ್ದ ವಿವರವಿದೆ. 'ಬಂಡಾಯ ಮಾಡಿದ ರಾಯ' ಎನ್ನುವ ಹಾಡೂ ಕೂಡ ತೆರಿಗೆ ವಸೂಲಿಯಲ್ಲಾಗುತ್ತಿದ್ದ ಅನ್ಯಾಯ ಮತ್ತು ಕಾನೂನುಬಾಹಿರ ಅಧಿಕಾರ ಚಲಾವಣೆಯನ್ನು ತಿಳಿಸುತ್ತದೆ'. ಊರ ಕುಲಕರ್ಣಿ ತಾನು ಉಟ್ಟ ಧೋತರವನ್ನು ಒಗೆದು ತರಲು ರಾಯಣ್ಣನಿಗೆ ಹೇಳಿದಾಗ, ಉಟ್ಟ ಧೋತರವನ್ನು ಒಗೆದು ತರಲು ತಾನೇನು ಬಿಟ್ಟಿ ಆಳಲ್ಲವೆಂದು ನಿರಾಕರಿಸುತ್ತಾನೆ. ಇಲ್ಲಿ ವಸಾಹತುಶಾಹಿ ಆಡಳಿತವು ಸ್ಥಳೀಯವಾಗಿ ನಿರ್ಮಾಣಗೊಳಿಸಿದ್ದ ನಾಯಕರು ತಮ್ಮ ಕೆಳಗಿನವರನ್ನು ತುಳಿತಕ್ಕೆ ಒಳಮಾಡುತ್ತಿದ್ದ ಚಿತ್ರಣ ದೊರಕುತ್ತದೆ. ತನ್ನ ಮಾತನ್ನು ಕೇಳದ ರಾಯಣ್ಣನಿಗೆ 'ತೆರಿಗೆ ಕಟ್ಟಲು ಸರಕಾರದಿಂದ ಆದೇಶ ಬಂದಿದೆಯೆಂದೂ, ತಕ್ಷಣವೇ ತೆರಿಗೆ ಕಟ್ಟಬೇಕೆಂದೂ' ಕುಲಕರ್ಣಿ ಹೇಳುತ್ತಾನೆ. ಅಲ್ಲದೇ ರಾಯಣ್ಣ ತನ್ನ ಪ್ರೀತಿಯ ಎತ್ತುಗಳನ್ನು ಮಾರಿ ಕಂದಾಯ ಕಟ್ಟುತ್ತಾನೆ.

**ಅ. ಆದಾಯ ತೆರಿಗೆ (ಲಾವಣಿ)**

ಆದಾಯ ತೆರಿಗೆಗೆ ಸಂಬಂಧಿಸಿದಂತೆ ಇರುವ ಒಂದು ಲಾವಣಿಯ ಕುರಿತು ಪ್ರಸ್ತಾಪಿಸಿ, ಡಿ.ರಘುನಾಥರಾವ್ ಅವರು 'ಮುಸಲ್ಮಾನರು, ತೆರಿಗೆಯನ್ನು ವಿರೋಧಿಸಿ 'ಮಸೂತಿ'ಯಲ್ಲಿ ಅಡಗಿಕೊಳ್ಳುತ್ತಾರೆ. ಆಗ ಅವರನ್ನು ಬಾರಿಸುವ ಇರಾದೆಯಿಂದ ಅಧಿಕಾರಿ 'ಕಾ (ಕಹಾ) ಹೈ ಧೂಂಡಕರಲಕಾವ್ ಅರೆಲಕಡಿ' ಎಂದು ಆಜ್ಞಾಪಿಸುತ್ತಾನೆ. ಆಗ ಇನ್ನೇನು 'ಬೇಡಿ ಹಾಕ್ತಾನ ನಮಗ' ಎಂದು ಅವರು ಭಯ-ಆಂತಕಕ್ಕೊಳಗಾಗುತ್ತಾರೆ. ಸರಕಾರದ ಅಧಿಕಾರಿಯ ಬಂಗಲೆಗೆ ಬಂದು 'ಖಾವಂದರಿಗೆ' ತಮ್ಮ 'ಅಹವಾಲು' ಅರ್ಪಿಸುತ್ತಾರೆ. ಬಡವರ ದೈನ್ಯ ಅಸಹಾಯಕತೆಯನ್ನು ನಿಂತುಕೊಂಡೇ ಕೇಳಿಕೊಂಡು ಕಸಿವಿಸಿಗೊಂಡು 'ಲಗುಮಾಡಿ ಅರಜಿ ಬರಿಶಿಕೊಡಿ' ಎಂದು ಸರಕಾರದ ಅಧಿಕಾರಿ ಹೇಳುತ್ತಾನೆ.

ಈ ಲಾವಣಿಯು ಬ್ರಿಟಿಷ್ ವ್ಯವಸ್ಥೆಯು ಜನಸಾಮಾನ್ಯರಿಗೆ ಒದಗಿಸಿದ ಸಂಕಷ್ಟದ ಘಟ್ಟಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಇಡೀ ಸಮುದಾಯದ ಪ್ರತಿನಿಧಿ ಎಂಬಂತೆ ಲಾವಣಿಕಾರನು ಬ್ರಿಟಿಷ್ ಆರ್ಥಿಕ ನೀತಿಗೆ ಪ್ರತಿಕ್ರಿಯಿಸುತ್ತಾನೆ.

"ಏನ ಹೇಳಲಿ ಜನ್ಮದಾ ಗೋಳ ।
ಇಂಗರೇಜಿ ಉಪದರ ಆದೀತು ಬಹಳಾ
ಕಠಿಣ ಬಡವರದ ತುಂಬೋದು ಹೊಟ್ಟಿ
ಮಾರಿಕೊಟ್ಯಾರೋ ನೂಲುವ ರಾಟಿ
ಹಲಗೀ ಕುಂಚಿ-ರೇಸಮಿಪಟ್ಟಿ
ಭಾಂಡೇ ಸಾಮಾನಾ ಜಮನುಪಾಟಿ
ಲಿಲಾವ ಮಾಡಸ್ಯಾರ ಕಿಮ್ಮತಕಟ್ಟಿ
ಬಾಳಕೆಟ್ಟಾರಣ್ಣಾ ಸರಕಾರ"೩

ಗಾಡಿನ್ ಸಾಹೇಬನೆಂಬ ಆಂಗ್ಲ ಅಧಿಕಾರಿಯು ಸ್ಥಳೀಯ ಸಾಮಾಜಿಕ ವ್ಯವಸ್ಥೆಯನ್ನು ಹಿಡಿತದಲ್ಲಿ ಹೊಂದಿದ ಪಂಚ(ಪಂಚಾಯಿತಿಯವರು)ರನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಂಡು ಹೊಸ ಬಗೆಯ ಆದಾಯ ತೆರಿಗೆಯನ್ನು ದೇಶಕ್ಕೆ ಪಂಚಾಯಿಸುತ್ತಾನೆ. ಪಾರಂಪರಿಕ ಭಾರತೀಯ ಸಮಾಜದಲ್ಲಿ ಅಧಿಕಾರ ಹೊಂದಿದ್ದ ಸ್ಥಳೀಯ ಆಡಳಿತಗಾರರು ಹಣದ ವ್ಯಾಮೋಹಕ್ಕೆ ಒಳಗಾಗಿ ಇದನ್ನು ಸ್ವಾಗತಿಸಿದರ ಫಲವಾಗಿ ಇಡೀ ದೇಶದ ಬಡವರ ಸ್ಥಿತಿಯು ಇನ್ನಷ್ಟು ಚಿಂತಾಜನಕವಾಯಿತು ಎಂದು ಲಾವಣಿಕಾರ ವಿವರಿಸುತ್ತಾನೆ. ಸರಕಾರ ವಿಧಿಸಿದ ಆದಾಯ ತೆರಿಗೆಯನ್ನು ಕಟ್ಟುವುದಕ್ಕಾಗಿ ಬಡವರು ತಮ್ಮ ನೂಲುವ ರಾಟೆಗಳನ್ನೇ ಮಾರಬೇಕಾದ ದುರಂತ ಎದುರಾದುದನ್ನು ಲಾವಣಿ ವಿವರಿಸುತ್ತದೆ. ಜನರು ತಮ್ಮ ವಸ್ತುಗಳನ್ನು ಮಾರಿಯಾದರೂ ಆದಾಯ ತೆರಿಗೆಯನ್ನು ತೀರಿಸತೊಡಗಿಸಿದ ಮೇಲೆ ಸರಕಾರಕ್ಕೆ ಹಣದ ಆಸೆ ಮತ್ತಷ್ಟು ಹೆಚ್ಚಾಗತೊಡಗಿತು.

"ಕಟಗಿ ಮಾರತಾರ ಮಾಡಿ ತೂಕ
ಪ್ಯಾಂಡಾರೆರು ಲಮಾಣೆರು ಕಟಗಿ
ಮಾರಿ ತಮ್ಮ ಮಕ್ಕಳ ಮಾಡತಿದ್ರ ಜೋಕಿ
ಈಗ ಬೇಡುದ ಬಂದತಿ ಬಿಕ್ಕಿ
ಓಡಿಯಾಡಿ ಹೋದಾವಾ ಕೈ-ಕಾಲಾ
ಕುಳ ನೀರ ಬಿಟ್ಟ ಕುಂತರ್-ಅಲ್ಲಾ
ಸೌಕಾರ ವಸ್ತೋಡವಿ ತಗದಿಟ್ಟು
ಹರಕ ದೋತರ ಅಂಗಿಯ ತೊಟ್ಟು
ಬಂಗಲೆಕ ಹೋಗುವ ನಾಚಿಕೆ ಬಿಟ್ಟು"೪

ರೈತರು, ಕುಶಲಕರ್ಮಿಗಳು ಅತ್ಯಂತ ಸಂಕಷ್ಟದ ಸ್ಥಿತಿಗೆ ಒಳಗಾದರು. ಜನಸಾಮಾನ್ಯರೆಲ್ಲ ಸೇರಿ ತಮ್ಮೊಳಗಿನ ನಾಯಕರನ್ನು ಮುಂದುಮಾಡಿ ಕಡಿಮೆ ತೆರಿಗೆ ವಿಧಿಸುವಂತೆ ಕೋರಿಕೊಂಡರೂ ಅಧಿಕಾರಿಯ ಮನಸ್ಸು ಕರಗಲಿಲ್ಲ. ಕಂದಾಯ ಕಟ್ಟದವರಿಗೆ ನೋಟೀಸು ನೀಡಲಾಯಿತು. ವಾಯಿದೆ ಮೀರಿದವರಿಗೆ ಬಡ್ಡಿ ಕಟ್ಟುವಂತೆ ಆದೇಶಿಸಲಾಯಿತು.

"ಪಟಗಾರ ಹೇಳ್ಯಾರ ಸುಭೇದಾರಗ
ನೀ ನಮ ಹಡದ ತಂದಿ ಹಾಂಗ
ಸೊಲ್ಪ ಕರಣ ಬಂದ ಹೊಟ್ಯಾಗ

ಬಿಡೋ ದಯ ಮಾಡಿ
ಎಲಪಾಟಾ ಸಾಹೇಬ ಬಂದ ಸರದಾರಾ
ಬಡವರ ಮ್ಯಾಲ ಇದ್ದ ಬಲ ಫೇರಾ
ಆಗ ಕುಂತ ಮಾಡ್ಯಾನ ವಿಚಾರ ಕೇಳರಿ ಹೀಂಗಿಶಿ

ಸಾವಕಾರ, ತಳವಾರ, ಸುಭೇದಾರ ಯಾರೂ ಜನತೆಯ ಸಂಕಷ್ಟಕ್ಕೆ ಸಹಾಯಕರಾಗಲಿಲ್ಲ. ಹಲಗೆ, ಕುಂಟೀ, ರೇಶಿಮೆ-ಪಟ್ಟಿ, ಬಾಂಡೆ-ಸಾಮಾನು, ಜುಮಾನು ತಾಟಿ ಎಲ್ಲವನ್ನೂ ಜಪ್ತಿ ಮಾಡಿ ಕೊಂಡೊಯ್ಯಲು ಆರಂಭಿಸಿದರು. ಇಲ್ಲಿ ವಿವರಿಸಲಾದ ಎಲಪಾಟಾ ಸಾಹೇಬ ಕರುಣೆಯಿದ್ದವನೆಂಬುದಾಗಿ ಹೇಳಲಾಗಿದೆ. ಅನೀತಿಯ ರಾಜಕಾರಣದಲ್ಲೂ ಅಲ್ಲೊಂದು-ಇಲ್ಲೊಂದು ಎನ್ನುವಂತೆ ಒಳ್ಳೆಯ ಅಧಿಕಾರಿಗಳೂ ಇದ್ದರೆಂಬುದನ್ನು ಈ ಲಾವಣಿ ಸೂಚಿಸುತ್ತದೆ. ಸಾಹೇಬ ಬಂದು ನೆರೆದ ಮುಸಲ್ಮಾನರನ್ನು ಕರುಣೆಯಿಂದ ನೋಡಿದನೆಂದು ಹೇಳಲಾಗಿದೆ.

"ಸಾಹೇಬ ನೋಡಿದಾನ ಸೋಸಿ
ಲಗುಮಾಡಿ ಅರ್ಜಿ ಕಂಡಂತಾನ ಬರಸಿ
ಅವನ ಹೊಟ್ಟ್ಯಾಗ್ – ಆತ ಕಸವಿಸಿ
ಬೆಂಕಿ ಬಿದ್ದಾಂಗ
ಮುಸಲರ ಅಂತರಾ ಅರೆ ಅಲ್ಲಾ
ವರ್ಸಾತ ಗೋದಿ ಅಕ್ಕಿ ಉಂಡಿಲ್ಲಾ
ನಮ್ಮ ಪಡಿಪಾಟ್ಲ ಶಿವನೆ ಬಲ್ಲಾ
ಕೊಡುನು ನಾವ್-ಏನಾ"೬

ಎಷ್ಟೇ ಆದರೂ ಸಮಾಜದಲ್ಲಿನ ಜನರ ಕಷ್ಟಗಳಿಗೆ ಪರಿಹಾರವೊದಗಲಿಲ್ಲ. ಊಟ-ತಿಂಡಿಗೂ, ಕಾಳು-ಕಡ್ಡಿ ಇಲ್ಲದ ಸಂದರ್ಭದಲ್ಲಿ ಕಂದಾಯ ಕಟ್ಟಲು ಜನ ಪರದಾಡುವಂತ ಸ್ಥಿತಿ ಉಂಟಾಯಿತು. ಈ ರೀತಿಯಲ್ಲಿ ಆದಾಯ ತೆರಿಗೆ ಕಾಯಿದೆಯು ವಸಾಹತುಶಾಹಿ ಸಮಾಜದಲ್ಲಿ ಹೊಸ ರೀತಿಯ ಆರ್ಥಿಕ ಮುಗ್ಗಟ್ಟನ್ನು ಉಂಟುಮಾಡಿತು. ಆದಾಯ ತೆರಿಗೆಯ ಭಿನ್ನ ಪರಿಣಾಮಗಳು ದೇಶದಾದ್ಯಂತ ಘಟಿಸಿದವು. "ಬಂಗಾಳದಲ್ಲಿ, ೧೭೬೪-೬೫ರಲ್ಲಿ ೮,೧೧,೦೦೦ ಪೌಂಡ್ ಇದ್ದ ಕಂದಾಯದ ಮೊತ್ತವು ೧೭೬೫-೬೬ರಲ್ಲಿ, ಎಂದರೆ ದಿವಾನೀ ಪದ್ಧತಿ ಜಾರಿಗೆ ಬಂದ ಮೊದಲ ವರ್ಷದಲ್ಲಿ ೧೭,೪೦,೦೦೦ ಪೌಂಡ್‌ಗೆ ಏರಿತು"೭

**ಆ. ಅಬಕಾರಿ ಕಾಯಿದೆ:**

ತಾವೇ ಸಾರ್ವತ್ರಿಕಗೊಳಿಸಿದ್ದ ಮಾದಕ ಪಾನೀಯಗಳ ಬಳಕೆಯನ್ನು ಬ್ರಿಟಿಷರೇ ಸುಲಿಗೆಯ ದಾರಿಯನ್ನಾಗಿಸಿಕೊಂಡರು. ಜನರು ರೂಢಿ ಮಾಡಿಕೊಂಡಿದ್ದ ಮಾದಕ ಪಾನೀಯಗಳ ಬಳಕೆಗೆ ಸರಕಾರದ ಅನುಮತಿ ಪಡೆಯಬೇಕೆಂದು ಸೂಚಿಸಲಾಯಿತು.

"ಸಿಂಧಿ-ಸೆರೆದಂಗಡಿಗೆ ಸುಂಕ ಹಾಕುವರು
ತಿಂದು ತಿಂದು ತಿರುಗಿ ಸುಂಕ ಬೇಡುವರು
ಕೊಡಲಿಯಿಂದ ಈಚಲ ಗಿಡಗಳನು
ಕಡೆಯಿರೀಗ ಅದು ತಡೆಯದೊಂದಿನ"೮

ಭಗಿನಿ, ತಾಳೆ ಮೊದಲಾದ ಮರಗಳಿಂದ ತೆಗೆಯುವ ಕಳ್ಳು, ಅಕ್ಕಿ, ರಾಗಿ ಮುಂತಾದ ಧಾನ್ಯಗಳಿಂದ ಸರಾಯಿ ತಯಾರಿಸಿಕೊಳ್ಳುವುದು, ಬೆಲ್ಲ, ಬಾಳೆಹಣ್ಣುಗಳಿಂದ ಸರಾಯಿಭಟ್ಟಿ ಇಳಿಸುವಿಕೆಗಳನ್ನು ನಿರ್ಬಂಧಿಸಲಾಯಿತು. ಪ್ರತಿಯೊಂದಕ್ಕೂ ಲೈಸನ್ಸ್ ಪಡೆಯುವಂತೆ ಆದೇಶಿಸಲಾಯಿತು. ಸುಂಕ ಕಟ್ಟುವಂತೆ ಹೇಳಲಾಯಿತು. ಆದರೆ ಈ ಎಲ್ಲಾ ನಿಯಮಗಳು ಸಮಾಜದ ಹಿತದೃಷ್ಟಿಯಿಂದ ಆಗಿರದೇ, ಹಣಗಳಿಸುವ ಉದ್ದೇಶಕ್ಕಾಗಿತ್ತು. "ಮದರಾಸು ಪ್ರಾಂತ್ಯದಲ್ಲಿ ಅಬಕಾರಿ ಸುಂಕದ ಬಾಬ್ತು ಆದಾಯ ೧೮೮೨-೮೩ರಲ್ಲಿ ೬೦ ಲಕ್ಷವಿದ್ದುದು, ೧೯೨೦ಕ್ಕೆ ೫ ಕೋಟಿ ೪೦ ಲಕ್ಷಕ್ಕೇರಿತು. ಸರ್ಕಾರದ ಒಟ್ಟು ಆದಾಯದಲ್ಲಿ ಭೂಕಂದಾಯದ ಪಾಲು ೧೮೮೦ರಲ್ಲಿ ಶೇಕಡಾ ೫೭ ಇದ್ದುದು ೧೯೨೦ರಲ್ಲಿ ಶೇಕಡಾ ೨೮ಕ್ಕೆ ಇಳಿಯಿತು. ಭೂಕಂದಾಯವನ್ನು ಏರಿಸುವುದು ಅಸಾಧ್ಯ ಎಂಬ ಪರಿಸ್ಥಿತಿ ಒದಗಿದಾಗ ಸರ್ಕಾರವು ತನ್ನ ಆದಾಯ ವೆಚ್ಚ ಸರಿದೂಗಿಸಲು ಕಂಡುಕೊಂಡ ಒಂದು ದಾರಿ ಈ ಅಬಕಾರಿ ಸುಂಕ".೯

ರಾಷ್ಟ್ರೀಯ ಚಳುವಳಿಗಳ ಕಾಲಘಟ್ಟದಲ್ಲೂ ಸಾವಿರಾರು ಜನ ದೇಶದಾದ್ಯಂತ ಸುಂಕ, ತೆರಿಗೆ ಮೊದಲಾದವನ್ನು ವಿರೋಧಿಸಿ ಚಳುವಳಿಗಳನ್ನು ಹಮ್ಮಿಕೊಂಡರು. ಕಾನೂನು ಭಂಗವಂತೂ ಇದರ ಪ್ರಮುಖ ಭಾಗವಾಗಿತ್ತು. ಅದಕ್ಕೆ ಇಲ್ಲೊಂದು ಉದಾಹರಣೆಯಿದೆ. ೧೯೩೦ರಲ್ಲಿ 'ಕಾಯಿದೆ ಭಂಗ" ಚಳುವಳಿ ಶುರುವಾಯಿತು. "ಗೋವೆಯಿಂದ ಬರುತ್ತಿದ್ದ ಸಾಮಾನುಗಳ ಮೇಲೆ ಬ್ರಿಟಿಷ್ ಸರಕಾರ ಸುಂಕವನ್ನು ವಸೂಲು ಮಾಡುತ್ತಿತ್ತು. ಗೋವೆಯಿಂದ ತೆಂಗಿನಗರಿ (ಮಡಲು) ತಂದು ಬಡಜನರು ಕಾರವಾರದಲ್ಲಿ ಮಾರಿ ನಾಲ್ಕು ಕಾಸು ಸಂಪಾದಿಸುತ್ತಿದ್ದರು. ಅವರಿಗೆ ಈ ಸುಂಕ ತಲೆಭಾರವಾಗಿತ್ತು. ಈ ಸುಂಕ ತೆರುವ ಕಾನೂನು ಭಂಗಿಸಲು ನಿರ್ಣಯಿಸಿ ಡಾ॥ ಹರ್ಡೀಕರ್ ಅನುಮತಿ ಕೇಳಿದೆವು. ಅಂಕೋಲೆಯಲ್ಲಿದ್ದ ಅವರು ಅನುಮತಿ ನೀಡಿದರು. ಗಡಿಬಳಿಯ ಅಂಗಡಿ ಗ್ರಾಮದಲ್ಲಿ ಎಲ್ಲ ಸ್ವಯಂ ಸೇವಕರ ಶಿಬಿರವನ್ನು ಒಂದು ತಿಂಗಳ ಕಾಲ ಹಾಕಿದೆವು. ಆರಂಭದಲ್ಲಿ ಸುಂಕ ಕೊಡದೆ ತೆಂಗಿನ ಗರಿ ಗೋವೆಯಿಂದ ತಂದು ಮಾರಿದೆವು. ಹಳ್ಳಿಯ ಕೂಲಿ ಹೆಂಗಸರ ಸಹಾನುಭೂತಿ ಸಿಕ್ಕಿತು. ಮುಂದೆ ಅಗ್ಗದ ಉಪ್ಪು ತರಲು ನಿರ್ಣಯಿಸಿ, ಈ ಕಾರ್ಯದಲ್ಲಿ ಸಹಕರಿಸಲು ಅಂಗಡಿ, ಮಾಜಾಳಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ಮನೆಮನೆಗೂ ನುಗ್ಗಿ ಪ್ರಚಾರ ಮಾಡಿದೆವು. ನಿರ್ಧರಿಸಿದ ದಿನ ಸುಮಾರು ೨೦೦೦ ಜನ ಗೋವಾ ಗಡಿಯೊಳಗೆ ಹೋದೆವು (೧೫.೦೬.೧೯೩೦)"೧೦

**ಇ. ಉಪ್ಪಿನ ತೆರಿಗೆ:**

ಭಾರತೀಯರು ಉಪ್ಪು ತಯಾರು ಮಾಡುವುದಕ್ಕೂ ಸರಕಾರವು ತೆರಿಗೆ ವಿಧಿಸಿತು. ಪ್ರತಿಯೊಬ್ಬ ಸಾಮಾನ್ಯ ಜನತೆಯೂ ಸುಲಿಗೆಗೆ ಗುರಿಯಾಗುವಂತಾಯಿತು. ಉಪ್ಪು ತಯಾರಿಸಲು ಅನುಮತಿ ಪಡೆಯಬೇಕೆಂದೂ, ಅನುಮತಿ ಪಡೆಯಲು ತೆರಿಗೆ ಕಟ್ಟಬೇಕೆಂದೂ ಹಾಗೂ ತಯಾರಿಸಿದ ಉಪ್ಪಿನ ಮೇಲೂ ಮತ್ತೆ ಸುಂಕ ಕಟ್ಟಬೇಕೆಂದು ನಿಯಮಗಳಾದವು. ೧೯೩೦ ಮಾರ್ಚ ಹಾಗೂ ಎಪ್ರಿಲ್ ತಿಂಗಳಲ್ಲಿ ಗಾಂಧೀಜಿಯವರು ಈ ನಿಯಮದ ವಿರುದ್ಧ ದಂಡೀ ಸತಾಗ್ರಹವನ್ನು ನಡೆಸಿದರು. ಬ್ರಿಟಿಷರ ನೀತಿಯನ್ನು ಮುರಿದು ಉಪ್ಪು ತಯಾರಿಸಲಾಯಿತು. ಈ ಸಂದರ್ಭದಲ್ಲಿ ಗಾಂಧೀಜಿಯವರನ್ನು ಬಂಧಿಸಲಾಯಿತು.

"ಉಪ್ಪಿನ ಕದನಕೆ ಹೊರಡಿರಿ ಜನರೇ
ಉಪ್ಪಿಗೆ ಬೇಕಾಗಿ ಹೋರಾಡಿ ಭಟರೇ
ಉಪ್ಪಿಗೂ ಗತಿಯಿಲ್ಲವೆಂದರೇನರ್ಥ?
ಉಪ್ಪನು ಗಳಿಸಲಾರದ ಬಾಳು ವ್ಯರ್ಥ"೧೧

ಇದಾದ ನಂತರದಲ್ಲಿ ಕರ್ನಾಟಕದ ಅಂಕೋಲದಲ್ಲಿ ಉಪ್ಪಿನ ಸತ್ಯಾಗ್ರಹವನ್ನು ನಡೆಸಲಾಯಿತು. ಎಪ್ರಿಲ್ ೧೩ರಂದು ಅದರ ಭಾಗವಾಗಿ ಉಪ್ಪನ್ನು ತಯಾರಿಸಲಾಯಿತು. ಸಾವಿರಾರು ಜನರು ಉಪ್ಪನ್ನು ತಯಾರಿಸಿದರು. ಹಲವಾರು ಜನರು ಉಪ್ಪನ್ನು

ಕೊಂಡರು. ಸುಮಾರು ನಲವತ್ತು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರೆನ್ನಲಾಗಿದೆ. ಸುಮಾರು ೪೫ದಿನಗಳ ಕಾಲ ಉಪ್ಪಿನ ಸತ್ಯಾಗ್ರಹ ನಡೆಯಿತೆನ್ನಲಾಗಿದೆ.

ಉಪ್ಪ ತಿಂದು ನಮಗ ತಿರುಗಿ ಬಿದ್ದಾರ
ಉಪ್ಪು ಮಾಡಿದರ ಗಪ್ಪನ ಹಿಡಿದಾರಾ
ಉಪ್ಪು ಮಾಡಿ ಸ್ವಾತಂತ್ರ್ಯವ ಪಡೆಯಿರಿ
ಉಪ್ಪಿನ ಕಾಯದೆಯ ಮುರಿದು ಹಾಕಿರಿ೧೨

ದಿನಬಳಕೆಯ ವಸ್ತುಗಳಲ್ಲಿ ಅತೀ ಮುಖ್ಯವಾದ ಉಪ್ಪನ್ನು ಕೂಡ ತೆರಿಗೆ ಕಟ್ಟಿ ತಯಾರಿಸಬೇಕು ಎಂಬ ಬ್ರಿಟಿಷರ ನೀತಿ ಸ್ಥಳೀಯರ ನಿಯಂತ್ರಣಕ್ಕೆ ಆಡಳಿತವು ರೂಪಿಸಿಕೊಂಡ ಮುಖ್ಯವಾದ ತಂತ್ರವಾಗಿತ್ತು. ಹೀಗಾಗಿ ಇಡೀ ಭಾರತವು ಬ್ರಿಟಿಷರ ಈ ನೀತಿಯ ವಿರುದ್ಧ ಸಿಡಿದೆದ್ದರು.

**ಈ. ಅರಣ್ಯ ಕಾಯಿದೆ:**

ಅರಣ್ಯ ಕಾಯಿದೆಗಳು ಬಹುವಾಗಿ ಪ್ರಭಾವ ಬೀರಿದುದು ಗುಡ್ಡಗಾಡು ಜನಗಳ ಮೇಲೆ. ಅರಣ್ಯಗಳನ್ನು ಸರಕಾರದ ಆಸ್ತಿಯೆಂದು ಘೋಷಿಸಲಾಯಿತು. ಅವುಗಳ ಸಂಪೂರ್ಣ ನಿಯಂತ್ರಣ ಹಾಗೂ ಪಾಲಿಕೆ ಸರಕಾರದ ಜವಾಬ್ದಾರಿ ಎಂದು ಘೋಷಿಸಲಾಯಿತು. ಕಾಡುಗಳಲ್ಲಿ ವ್ಯವಸಾಯ ಮಾಡುತ್ತಿದ್ದ ಜನಕ್ಕೆ ಇದರಿಂದ ತೊಂದರೆಯಾಯಿತು. ಬ್ರಿಟಿಷ್ ನೀತಿಗಳ ವಿರುದ್ಧ ಕಾಡಿನ ಜನ ದಂಗೆಯೆದ್ದರು. ಹಾಗೆ ನಡೆದ ಆದಿವಾಸಿಗಳ ಮೊದಲ ದಂಗೆಯೆಂದರೆ ಅದು ೧೭೮೫ರಲ್ಲಿ ನಡೆದ ಬಂಗಾಳ-ಬಿಹಾರದ ಗಡಿಯ ರಾಜ್ಮಹಲ್ ಅರಣ್ಯ ವಾಸಿಗಳ ದಂಗೆ. ಸಂತಾಲರು ಇದರಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದರು. ತಿಲಕಾಮಾಝಿ ಈ ದಂಗೆಯ ನಾಯಕ. ಬಿಲ್ಲು ಬಾಣದಂತ ತಮ್ಮ ಪಾರಂಪರಿಕ ಆಯುಧಗಳನ್ನು ಬಳಸಿ ಇವರು ಯುದ್ಧ ನಡೆಸಿದರು. ಕಲೆಕ್ಟರ್ ಕ್ಲೀವ್ ಲ್ಯಾಂಡನನ್ನು ಕೊಂದುಹಾಕಿದರು. ಇದಲ್ಲದೇ ಮೈಸೂರಿನ ನೈರುತ್ಯದಲ್ಲಿರುವ, ಕೇರಳದ ವೈನಾಡಿನಲ್ಲಿ ಇದ್ದ ಫಣಿಯಾ ಎಂಬ ಆದಿವಾಸಿಗಳು ಬ್ರಿಟಿಷರ ವಿರುದ್ಧ ಸಿಡಿದೆದ್ದರು. ಬ್ರಿಟಿಷ್ ಕಾಯಿದೆಗಳು ಇವರ ಹಕ್ಕನ್ನು ಕಳೆದು, ಅವರನ್ನು ಜೀತದಾಳುಗಳನ್ನಾಗಿ ನಡೆಸಿಕೊಳ್ಳತೊಡಗಿದರು. ೧೮೦೫ರಲ್ಲಿ ಈ ಜನ ದಂಗೆಯೆದ್ದರು. ಇವರು ತಮ್ಮ ದು:ಸ್ಥಿತಿಯನ್ನು ತೋಡಿಕೊಂಡ ಜನಪದ ಗೀತೆಯೊಂದು ಹೀಗಿದೆ.

“ತಿಲೇಕು ಬಾಳು ಬಂದು ಕಾಂಜ
ಅರೇಕು ಚಂಗಲೆ ಬಂದು ಕಾಂಜ
ಕೈಕು ಕೋಳ ಬಂದು ಕಾಂಜ”೧೩

ಅಂದರೆ ತಲೆಗೆ ಕತ್ತಿ ಬಂತು, ಸೊಂಟಕ್ಕೆ ಸಂಕೋಲೆ ಬಂತು, ಕೈಗೆ ಕೋಳ ಬಂತು ಎಂಬುದು ಈ ಸಾಲಿನ ಅರ್ಥ. ‘ಕುಮೇರು’ ಎನ್ನುವ ಕೃಷಿ ಪದ್ಧತಿಯನ್ನು ನಂಬಿದ ಆದಿವಾಸಿ ಸಮುದಾಯಗಳು ಇದರಿಂದ ತೊಂದರೆಗೊಳಗಾದರು. ಜನ ಕಾಡುಗಳಿಂದ ಸರಕಾರದ ಅನುಮತಿಯಿಲ್ಲದೆ ಮೇವು, ಸೌದೆ ಅಲ್ಲದೇ ಯಾವುದೇ ಅರಣ್ಯ ಮೂಲದ ವಸ್ತುಗಳನ್ನು ಮುಟ್ಟಬಾರದೆಂದು ನಿಯಮ ಹೇರಲಾಯಿತು. ಕರಕುಶಲ ವಸ್ತುಗಳನ್ನು ಮಾಡಲು ಬಳಸುವ ಬೆತ್ತ, ಬಿದಿರು ಮುಂತಾದ ಉತ್ಪನ್ನಗಳನ್ನು ಬಳಸುವುದನ್ನು ಅರಣ್ಯ ಸಂರಕ್ಷಣೆಯ ಹೆಸರಿನಲ್ಲಿ ನಿರ್ಬಂಧಿಸಲಾಯಿತು. ಆದರೆ ಅರಣ್ಯ ರಕ್ಷಣೆ ನಡೆಯಲಿಲ್ಲ. ಆದಿವಾಸಿಗಳು ಹಾಗೂ ಜನಸಾಮಾನ್ಯರಿಗೆ ಮಾತ್ರ ತೊಂದರೆಯಾಯಿತು. ಬಡಜನರು ಅರಣ್ಯ ಉತ್ಪನ್ನಗಳನ್ನು ನಂಬಿ ನಡೆಸುತ್ತಿದ್ದ ಆರ್ಥಿಕ ಬದುಕು ನೆಲೆ ಕಳೆದುಕೊಂಡಿತು. ಆದಿವಾಸಿ ಹೆಂಗಸರನ್ನು ಶೋಷಿಸಲಾಯಿತು. ಕ್ರೈಸ್ತಮತದ ಹೇರಿಕೆಗಳು ನಡೆದವು. ಅರಣ್ಯ ಶಾಸನವನ್ನು ವಿರೋಧಿಸಿ ಕುಮಟಾದಲ್ಲಿ ೨೦೦ ಮಹಿಳೆಯರು ಕಾನೂನು ಭಂಗ ಮಾಡಿದರು. ೧೭೯೯ರಿಂದ ೧೯೨೧ರವರೆಗೆ ಹದಿನೈದಕ್ಕೂ ಹೆಚ್ಚು ಬಾರಿ ಆದಿವಾಸಿಗಳು ದಂಗೆ ಎದ್ದುದು ಚರಿತ್ರೆಯಲ್ಲಿ ದಾಖಲಾಗಿದೆ. ೧೮೩೧ರಲ್ಲಿ ಕೋಲರು, ೧೮೮೫ರಲ್ಲಿ ಸಂತಾಲರು, ೧೮೯೯ರಲ್ಲಿ ಮುಂಡರು ನಡೆಸಿದ ದಂಗೆಗಳು ಗಮನಾರ್ಹವಾದವು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ತಂದ ಕಂದಾಯ ಪದ್ದತಿಯು ಭಾರತದ ಪಾರಂಪರಿಕ ಆದಾಯ ತೆರಿಗೆ ಪಾವತಿಯ ಕ್ರಮಕ್ಕಿಂತ ಸಂಪೂರ್ಣ ಭಿನ್ನವಾಯಿತು. ಭೂಮಿಯ ಒಡೆತನ ದುಡಿಯುವ ರೈತನದ್ದೆಂದು ಭಾವಿಸಲಾಗಿದ್ದ ಭಾರತೀಯ ಆಲೋಚನೆಯನ್ನು ಕಂಪೆನಿಯು ಬುಡಮೇಲಾಗಿಸಿತು. “ಕಂಪನಿಯ ಆಳ್ವಿಕೆಯಲ್ಲಿ ಸರಕಾರವೇ ಸರ್ವೋಚ್ಚ ಭೂಮಾಲಿಕ ಎಂದು ಭಾವಿಸಲಾಯಿತು. ಇಡೀ ಗ್ರಾಮ ಸಮುದಾಯ ಒಟ್ಟಾಗಿ ಉತ್ಪನ್ನದ ಒಂದು ಭಾಗವನ್ನು ಸರಕಾರಕ್ಕೆ ನೀಡುವ ಸಾಂಪ್ರದಾಯಿಕ ಪದ್ಧತಿಯ ಜಾಗದಲ್ಲಿ ಬಿಡಿ ಹಿಡುವಳಿಯ ಮೇಲೆ ವಿಧಿಸಲಾಗುವ ನಿರ್ದಿಷ್ಟ ಮೊತ್ತದ ಕರವನ್ನು ನೀಡಬೇಕಾದ ವಿಧಾನವು ಜಾರಿಗೆ ಬಂದಿತು. ಇಂತಹ ಮೊತ್ತವು ಆ ವರ್ಷ ಸುಗ್ಗಿ ಚೆನ್ನಾಗಿ ಆಯಿತೇ ಇಲ್ಲವೇ ಎಂಬುದನ್ನಾಗಲೀ, ಹಿಡುವಳಿಯ ಎಷ್ಟು ಭಾಗದಲ್ಲಿ ಕೃಷಿ ಮಾಡಲಾಗಿದೆ ಎಂಬುದನ್ನಾಗಲೀ ಗಣನೆಗೆ ತೆಗದುಕೊಳ್ಳುತ್ತಿರಲಿಲ್ಲ. ಹೆಚ್ಚಿನ ಸಂದರ್ಭದಲ್ಲಿ ಕರ ನಿಗದಿಯು ವೈಯಕ್ತಿಕವಾಗಿರುತ್ತಿತ್ತು.”೧೪

“ಸರಕಾರದ ದೊರಿತ ಮಸಲತ್ತಾ
ಕರಪಟ್ಟಿ ಹಾಕ್ಯಾರ ತುರತಾ – ತುರತಾ
ರೈತರ ದುಡ್ಡು ಎಳುವಾ ಹಿಕಮತ್ತಾ
ಮಾಡಿದಾರ ಹೀಂಗ”೧೫

ಸರ್.ಸಯ್ಯದ್ ಅಹ್ಮದ್‌ಖಾನ್ ತನ್ನ ‘ದ ಕಾಸ್ ಆಫ್ ದಿ ಇಂಡಿಯನ್ ರಿವೋಲ್ಟ್’ ಪುಸ್ತಕದಲ್ಲಿ ಬರೆಯುತ್ತಾನೆ. “ಇಂಗ್ಲೀಷ್ ಸರಕಾರವು ಜಾರಿಗೆ ತಂದ ಭೂಕಂದಾಯದ ನಿರ್ಧಾರಣೆಯ ಪದ್ದತಿಯು ಮುಂಚಿನ ದರಗಳಿಗೆ ಹೋಲಿಸಿದರೆ ಅಧಿಕವಾಗಿದೆ. ಇಂಗ್ಲಿಷ್ ಸರಕಾರವು ಹೇರುತ್ತಿರುವ ದರವು ವಿವಿಧ ಸಂಭವನೀಯ ಸ್ಥಿತಿಗಳನ್ನು ಗಣನೆಗೆ ತೆಗೆದುಕೊಳ್ಳದೇ ನಿಗದಿ ಮಾಡಲಾಗಿದೆ. ರೈತರು ಪಾಳುಬಿದ್ದ ಬಂಜರು ಭೂಮಿಗೂ ಪೈರು ಬೆಳೆಯುವ ಭೂಮಿಯಷ್ಟೆ ಪ್ರಮಾಣದಲ್ಲಿ ಕಂದಾಯವನ್ನು ಕೊಡಬೇಕಾಗಿದೆ. ಭೂಕಂದಾಯವನ್ನು ಕಟ್ಟಲು ರೈತರು ಸಾಲವನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಈ ಸಾಲದ ಮೇಲಿನ ಬಡ್ಡಿಯೂ ಮಿತಿಮೀರಿದ್ದಾಗಿದೆ.”೧೬ಇದು ಬ್ರಿಟಿಷ್ ಆಡಳಿತಗಾರರಿಗೂ ಅರ್ಥವಾಗಿದ್ದ ಸತ್ಯವಾಗಿತ್ತು. ಆದರೂ ರೈತರಿಗೆ ಈ ತೆರಿಗೆ ಕ್ರಮದಿಂದ ಲಾಭವಿದೆಯೆಂದೇ ಅವರು ವಾದಿಸುತ್ತಿದ್ದರು. ಕಂಪನಿಗೆ ಇದೊಂದು ಸಂಪಾದನೆಯ ಅತ್ಯುನ್ನತ ಮಾರ್ಗವಾಗಿತ್ತು. ಹೀಗಾಗಿ ಇದೊಂದು ಕ್ರೂರ ಪದ್ದತಿಯಾಗಿ ರೂಪಗೊಂಡಿತು. ‘ಸಂಗೊಳ್ಳಿ ರಾಯಣ್ಣನು ಕಂದಾಯ ವಸೂಲಿಗೆ ಬಂದ ಬ್ರಿಟಿಷ್ ಅಧಿಕಾರಿಯನ್ನು ಕೊಂದ ಸ್ಥಳಕ್ಕೆ ‘ರಕ್ತ ಮಾನ್ಯ ಹೊಲ’ ಎಂದು ಕರೆಯಲಾಗುತ್ತದೆ’ ಎನ್ನಲಾಗಿದೆ. ಇದು ಬೇವಿನಕೊಪ್ಪ ಪ್ರದೇಶದಲ್ಲಿದ್ದು ರಾಯಣ್ಣನ ವಂಶಸ್ಥರು ಇದನ್ನು ಬೇರೆಯವರಿಗೆ ಮಾರಿದ್ದೂ ಆ ಜಾಗವನ್ನು ಕೊಂಡುಕೊಂಡವರು ಅಲ್ಲಿ ಉಳುಮೆ ಮಾಡುತ್ತಾರೆಂದು ವಕ್ತೃವೊಬ್ಬರು ಹೇಳಿದ್ದಾರೆ. ಎಂದರೆ ಅಧಿಕಾರಿಯೊಬ್ಬನನ್ನು ಕೊಲ್ಲುವಷ್ಟರ ಮಟ್ಟಿಗೆ ಆರ್ಥಿಕ ಶೋಷಣೆ ಜಾರಿಯಲ್ಲಿತ್ತೆಂಬುದು ತಿಳಿದುಬರುತ್ತದೆ. ೧೭೫೭ರ ಪ್ಲಾಸಿ ಕದನ

ಹಾಗೂ ೧೮೫೭ ರ ಕ್ರಾಂತಿಯ ನಡುವೆ ಕಂಪನಿಯು ಇಪ್ಪತ್ತು ಆಂತರಿಕ ಯುದ್ಧಗಳನ್ನು ಮಾಡಿದ ಕುರಿತು 'ತಲ್ಮೀಜ್ ಖಲ್ದೂನ್' ತಮ್ಮ 'ಮಹಾ ಬಂಡಾಯ ಲೇಖನದಲ್ಲಿ ವಿವಸಿದ್ದಾರೆ. ಬಂಗಾಳ, ಬಿಹಾರ, ಒರಿಸ್ಸಾಗಳನ್ನು ತನ್ನದಾಗಿಸಿಕೊಂಡ ಕಂಪನಿಯು ರಾಜ್ಯ ವಿಸ್ತರಣೆಯ ಗೀಳು ಹತ್ತಿಸಿಕೊಂಡಿತು. ಒಂದು ನೂರು ವರ್ಷಗಳಲ್ಲಿ ಮೈಸೂರು, ಮಹಾರಾಷ್ಟ್ರ, ಕರ್ನಾಟಕ, ತಂಜಾವೂರು, ಬುಂದೇಲ್ ಖಂಡ್, ರೋಹಿಲ್ ಖಂಡ್, ಹರಿಯಾಣ(ವಿಭಜನೆಗೆ ಮುಂಚಿನ ವಾಯುವ್ಯ ಗಡಿ ಪ್ರಾಂತ್ಯಗಳನ್ನು ಒಳಗೊಂಡಂತೆ) ಪಂಜಾಬ್ ಮತ್ತು ಅವಧ್ ಇವೆಲ್ಲವೂ ಕಂಪನಿಯು ಆಳ್ವಿಕೆಗೆ ಸೇರಿದವು'"೧೭ಎತ್ತ ಹೋದರೂ ಬ್ರಹ್ಮಹತ್ಯೆಯಂತೆ ಎಲ್ಲರನೂ ಬೆಂಬತ್ತಿ ಬರುತ್ತಿದ್ದ ವೃತ್ತಿ ತೆರಿಗೆಯ ಬಗ್ಗೆ ಅನಾಮಿಕ ಕವಿಯೊಬ್ಬನ ವಿಡಂಬನೆಯಿದು.

"ಸುತ್ತಲೂ ಹಲವು ವಿಧದಿಂದ ಭಾರತದ ಸಂಪತ್ತು
ಪರದೇಶಕ್ಕೆದುವುದಲ್ಲದೇ॥
ಎತ್ತಪೋದರೂ ಬ್ರಹ್ಮಹತ್ಯೆಯಂತೆಲ್ಲರನು
ವೃತ್ತಿತೆರಿಗೆಯು ಬೆಂಬತ್ತಿ ಬರುವುದನೂ
ಚರಕವನೂ ಬಿಡದೇ ಪರದೇಶವಸ್ತುಗಳ ಕಡೆ
ತಿರುಗದೇ ದೇಶೀಯ ವ್ರತವ ಧರಿಸಿ
ವರುಷವೊಂದಕೆ ಬಟ್ಟೆಯೊಂದರೊಳು
ಪರದೇಶಕರವತ್ತುಕೋಟಿ ಪೋಗುವದಾ ಪ್ರತ್ಯಕ್ಷಾ॥೧೮

ಒಟ್ಟಿನಲ್ಲಿ ಕಂಪನಿಯು ಇಡೀ ರಾಷ್ಟ್ರವನ್ನು ಆರ್ಥಿಕವಾಗಿ ಕುಗ್ಗಿಸಲು ಬೇಕಾದ ರೀತಿಯಲ್ಲಿ ತನ್ನ ತಂತ್ರವನ್ನು ಯಶಸ್ವಿಯಾಗಿಸುತ್ತಲೇ ಸಾಗಿತು. ಕರಕುಶಲಿಗಳು ಕೈಗಾರಿಕಾ ಕ್ರಾಂತಿಯಿಂದಾಗಿ ಕೃಷಿಯತ್ತ ಹೊರಳಿದರು. ಪ್ರಾಚೀನ ಕೃಷಿ ತಂತ್ರಗಳಿಂದ ಅಭಿವೃದ್ಧಿ ಕಾಣದ ಕೃಷಿಕ ಮತ್ತಷ್ಟು ಬಡವನಾದವನು. ಭೂಕಂದಾಯ ನೀತಿಯು ಹೊಸ ಬಗೆಯ ಸುಲಿಗೆಯನ್ನು ಆರಂಭಿಸಲು ಪ್ರೇರಣೆ ನೀಡಿ ಬಡತನವನ್ನು ಇನ್ನಷ್ಟು ಹೆಚ್ಚಿಸಿತು. ಒಟ್ಟಿನಲ್ಲಿ ದೇಶೀಯ ಆಡಳಿತದಲ್ಲಿ ನಿರಾತಂಕವಾಗಿ ನಡೆಯುತ್ತಿದ್ದ ಸ್ಥಳೀಯ ಆರ್ಥಿಕತೆ ವಸಾಹತು ನೀತಿಗಳಿಂದಾಗಿ ಅತ್ಯಂತ ವಿಲಕ್ಷಣತೆಯನ್ನು ಪಡೆದುಕೊಂಡಿತು. ಪರಿಣಾಮವಾಗಿ ದೇಸದಾದ್ಯಂತ ಜನಸಾಮಾನ್ಯರು ಸಿಡಿದೇಳುವ ಪ್ರಸಂಗ ಸಹಜವಾಗಿ ತಲೆದೋರಿತು. ದಂಗೆಗಳು, ಚಳುವಳಿಗಳು ಸಹಜ ಪ್ರತಿಕ್ರಿಯೆಗಳಾಗಿ ರೂಪುಗೊಂಡವು.

**ಅಡಿಟಿಪ್ಪಣಿಗಳು**


೧. ಶಿವಾನಂದ ಗುಬ್ಬಣ್ಣನವರ 'ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ' ಅಕ್ಷಯ ಪ್ರಕಾಶನ ಧಾರವಾಡ –ಪುಟ–೧೪೩
೨. ಶಿವಾನಂದ ಗುಬ್ಬಣ್ಣನವರ 'ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ' ಅಕ್ಷಯ ಪ್ರಕಾಶನ ಧಾರವಾಡ –ಪುಟ–೧೪೩
೩. ರಾಮಣ್ಣ ಕ್ಯಾತನಹಳ್ಳಿ 'ಫ್ಲೀಟರು ಸಂಗ್ರಹಿಸಿದ ಲಾವಣಿಗಳು' (ಆದಾಯ ತೆರಿಗೆ ಲಾವಣಿ)ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೪. ರಾಮಣ್ಣ ಕ್ಯಾತನಹಳ್ಳಿ 'ಫ್ಲೀಟರು ಸಂಗ್ರಹಿಸಿದ ಲಾವಣಿಗಳು' (ಆದಾಯ ತೆರಿಗೆ ಲಾವಣಿ) ಕುವೆಂಪು ಕನ್ನಡ ಅದ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೫. ರಾಮಣ್ಣ ಕ್ಯಾತನಹಳ್ಳಿ 'ಫ್ಲೀಟರು ಸಂಗ್ರಹಿಸಿದ ಲಾವಣಿಗಳು' (ಆದಾಯ ತೆರಿಗೆ ಲಾವಣಿ) ಕುವೆಂಪು ಕನ್ನಡ ಅದ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೬. ರಾಮಣ್ಣ ಕ್ಯಾತನಹಳ್ಳಿ 'ಫ್ಲೀಟರು ಸಂಗ್ರಹಿಸಿದ ಲಾವಣಿಗಳು' (ಆದಾಯ ತೆರಿಗೆ ಲಾವಣಿ)ಕುವೆಂಪು ಕನ್ನಡ ಅದ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
೭. ಮಹಾಬಂಡಾಯ (ಲೇಖನ–ತಲ್ಮೀಜ್ ಖಲ್ದೂನ್, ಬಂಡಾಯ) (ಸಂ) – ಪಿ.ಸಿ.ಜೋಶಿ ಅನುವಾದ–ಎಂ. ಅಬ್ದುಲ್ ರೆಹಮಾನ್ ಪಾಷ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
೮. ಸೂರ್ಯನಾಥ ಕಾಮತ್(ಸಂ) 'ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು',ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೯. ಶಂಕರನಾರಾಯಣ ರಾವ್ ಎನ್.ಪಿ. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು ನವಕರ್ನಾಟಕ ಪ್ರಕಾಶನ ಬೆಂಗಳೂರು ಪುಟ:– ೬೯,
೧೦.ಸೂರ್ಯನಾರಾಯಣ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು (ವಕ್ತೃ– ಕೃಷ್ಣ ನಾರಾಯಣ ನಾಯಕ್)
೧೧. ಸೂರ್ಯನಾಥ ಕಾಮತ್(ಸಂ) ಸ್ವಾತಂತ್ರ್ಯ ಸಮರದ ಗೇಯಗೀತೆಗಳು, ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ; ಸ್ವರಾಜ್ಯ ಗೀತಾಮೃತ ಕಾಸರಗೋಡು–೧೯೪೭ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
೧೨.ಶಿವಾರೆಡ್ಡಿ ಕೆ.ಸಿ. ಕನ್ನಡದ ಹಾಡುಪಾಡು ಪುಟ–೨೭೧ ಕಾವ್ಯಮಂಡಲ ಬೆಂಗಳೂರು
೧೩.ಶಂಕರನಾರಾಯಣ ರಾವ್ ಎನ್.ಪಿ. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು ನವಕರ್ನಾಟಕ ಪ್ರಕಾಶನ ಬೆಂಗಳೂರು ಪುಟ–೨೫೮
೧೪.ಮಹಾಬಂಡಾಯ (ಲೇಖನ–ತಲ್ಮೀಜ್ ಖಲ್ದೂನ್, ಬಂಡಾಯ) (ಸಂ) – ಪಿ.ಸಿ.ಜೋಶಿ ಅನುವಾದ– ಎಂ. ಅಬ್ದುಲ್ ರೆಹಮಾನ್ ಪಾಷ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ (ಆದಾಯ ತೆರಿಗೆ ಲಾವಣಿ)
೧೫. ಅದೇ ಪುಟ – ೧೮,
೧೬.ಅದೇ ಪುಟ–೧೪
೧೭.ಅದೇ ಸೂರ್ಯನಾಥ ಕಾಮತ್(ಸಂ) 'ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು',ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು